**ಓ.ಎಸ್. ನಂ. 86/2018** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 9.8.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 3, ಮತ್ತು 7 ನೇ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ**

ಮೂಲ 4 ನೇ ಪ್ರತಿವಾದಿಯ ಗಂಡನಾದ ಖಾನ್‌ಸಿಂಗ್ ರವರನ್ನು ನಾನು ನೋಡಿರುತ್ತೇನೆ. ನನ್ನ ಹೆಸರಿಗೆ ಕ್ರಯಪತ್ರವಾದಾಗ 4 ನೇ ಪ್ರತಿವಾದಿ ಹಾಗೂ ಅವರ ಗಂಡನ ಪರಿಚಯವಾಗಿರುತ್ತದೆ. ಸದರಿ ಖಾನ್‌ಸಿಂಗ್ ರವರು ನಿಪಿ1 ದಾಖಲೆಗೆ ಸಹಿ ಮಾಡಿರಬಹುದು. ಕ್ರಯದ ಮಾತುಕತೆಯು ಮೈಸೂರಿನ ಹೋಟೆಲಿನಲ್ಲಿ ಆಗಿರುತ್ತದೆ. ಸದರಿ ಖಾನ್‌ಸಿಂಗ್ ರವರು ಹೆಚ್.ಡಿ.ಕೋಟೆಗೆ ಹೊಸದಾಗಿ ಬಂದಿದ್ದರಿಂದ 5 ನೇ ಪ್ರತಿವಾದಿಯಿಂದ 1 ಲಕ್ಷ ಹಣವನ್ನು ಶೇ 5 ಬಡ್ಡಿಗೆ ಸಾಲವಾಗಿ ಪಡೆದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಸಾಲ ಪಡೆದಾಗ 5 ನೇ ಪ್ರತಿವಾದಿಯು ಭದ್ರತೆಗಾಗಿ ಸದರಿ ಖಾನ್ ಸಿಂಗ್ ರವರ ಹೆಂಡತಿಯ ಹೆಸರಿನಲ್ಲಿದ್ದ ದಾವಆಸ್ತಿಯನ್ನು ಬರೆದುಕೊಡುವಂತೆ ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸಮಯದಲ್ಲಿ 5 ನೇ ಪ್ರತಿವಾದಿಯು ಆಧಾರಪತ್ರ ಮಾಡಿಸಿಕೊಳ್ಳುವುದಾಗಿ ಹೇಳಿ ದಿನಾಂಕ 30.12.2003 ರಂದು ನಿಪಿ2 ರಂತೆ ಕ್ರಯಪತ್ರವನ್ನು ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟಿಸ್ ನೀಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ಎನ್.ನಾಗರಾಜು ರವರು ಬದುಕಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಎನ್.ನಾಗರಾಜು ರವರು ಹೃದಯಘಾತದಿಂದ ತೀರಿಕೊಂಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಅವರ ಹೆಂಡತಿಗೆ ಮಾನಸಿಕ ಅಘಾತವಾಗಿದ್ದರಿಂದ ನಾನು ಕಳುಹಿಸಿದ್ದ ನೋಟಿಸಿಗೆ ಅವರು ಉತ್ತರ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಜಿಲ್ಲಾ ನೋಂದಣಾಧಿಕಾರಿಯವರ ನ್ಯಾಯಾಲಯದಲ್ಲಿ ಎನ್.ನಾಗರಾಜು ಮತ್ತು ಮೂಲ 4 ನೇ ಪ್ರತಿವಾದಿಯ ವಿರುದ್ಧ ದಾಖಲಾಗಿದ್ದ ಕೇಸಿನ ಬಗ್ಗೆ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ಪ್ರಸ್ತಾಪವಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 14.9.2006 ರಂದು ಜಿಲ್ಲಾ ನೋಂದಣಾಧಿಕಾರಿಯವರು ದಾವಆಸ್ತಿಗೆ ಭೇಟಿ ನೀಡಿ ದಾವಆಸ್ತಿಯಲ್ಲಿದ್ದ ಮನೆಯನ್ನು ಪರಿಶೀಲನೆ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಿಲ್ಲಾ ನೋಂದಣಾಧಿಕಾರಿಯವರು ದಾವಆಸ್ತಿಯಲ್ಲಿದ್ದ ಮನೆಯು ಶಿಥಿಲವಾಗಿರುತ್ತದೆ ಎಂದು ಜಿಲ್ಲಾ ನೋಂದಣಾಧಿಕಾರಿಯವರ ಹೆಚ್.ಡಿ.ಕೆ. 4/2006-17 ಅರ್ಜಿಯಲ್ಲಿ ಪ್ರಸ್ತಾಪ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಜಿಲ್ಲಾ ನೋಂದಣಾಧಿಕಾರಿಯವರ ಆದೇಶದಲ್ಲಿ ದಿನಾಂಕ 25.12.2003 ರಿಂದಲೂ ದಾವಆಸ್ತಿಯಲ್ಲಿ ಎನ್.ನಾಗರಾಜು ರವರು ಸ್ವಾಧೀನದಲ್ಲಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಸದರಿ ಜಿಲ್ಲಾ ನೋಂದಣಾಧಿಕಾರಿಯವರ ಆದೇಶದ ಬಗ್ಗೆ

ತಿಳಿಸಿದ ನಂತರ ನೀವು ಅದರ ಬಗ್ಗೆ ವಿಚಾರಣೆ ಮಾಡಿರುತ್ತಿರಾ ಎಂದರೆ ಸಾಕ್ಷಿದಾರರು ನೆನಪಿರುವುದಿಲ್ಲ ಎನ್ನುವರು.

ದಾವಆಸ್ತಿಯಲ್ಲಿ ಎನ್.ನಾಗರಾಜು ರವರು ಸ್ವಾಧೀನದಲ್ಲಿರುವ ವಿಚಾರ ಗೊತ್ತಿದ್ದರೂ ಸಹ ನಾನು ಮತ್ತು 5 ನೇ ಪ್ರತಿವಾದಿ ಶಾಮೀಲಾಗಿ ನಿಪಿ1 ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ನಿಪಿ2 ನ್ನು ಸೃಷ್ಟಿ ಮಾಡಿಕೊಂಡಿದ್ದರಿಂದ ಅವರು ದಾವಆಸ್ತಿಯ ಮಾಲೀಕರಾಗಿರಲಿಲ್ಲ ಮತ್ತು ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ8 ಖಾತೆ ಬದಲಾವಣೆಗೆ ನನ್ನ ಹೆಸರಿನಲ್ಲಿ ಕಟ್ಟಿರುವ ಶುಲ್ಕ ಆಗಿರುತ್ತದೆ, ಯಾರು ಕಟ್ಟಿರುತ್ತಾರೆ ಎಂದು ಈಗ ನೆನಪಿರುವುದಿಲ್ಲ. ನನ್ನ ಹೆಸರಿಗೆ ದಿನಾಂಕ 3.9.2004 ರಂದು ಕ್ರಯಪತ್ರವಾಗಿದ್ದು, ಖಾತೆ ಮಾಡಲು ನಿಪಿ8 ರಂತೆ ಶುಲ್ಕವನ್ನು ದಿನಾಂಕ 16.10.2006 ರಂದು ಪಾವತಿಸಿರುತ್ತೇನೆ ಎಂದರೆ ಸಾಕ್ಷಿದಾರರು ಡಿ.ಸಿ ನ್ಯಾಯಾಲಯದಲ್ಲಿ ಆದೇಶವಾದ ನಂತರ ಖಾತೆ ಬದಲಾವಣೆ ಶುಲ್ಕ ಕಟ್ಟಿರುತ್ತೇನೆ ಎನ್ನುವರು. ಜಿಲ್ಲಾಧಿಕಾರಿಯವರ ಆದೇಶದಲ್ಲಿ ನನ್ನ ಹೆಸರಿಗೆ ಖಾತೆ ಮಾಡಲು ಆದೇಶವಾಗಿರಲಿಲ್ಲ, ನಿಯಮಾನುಸಾರ ನೋಟಿಸ್ ನೀಡಿ ಸಂಬಂಧಪಟ್ಟವರ ಹೆಸರಿಗೆ ಖಾತೆ ಮಾಡಲು ಆದೇಶವಾಗಿತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಿಯಮಾನುಸಾರ ನನ್ನ ಹೆಸರಿಗೆ ಖಾತೆ ಮಾಡಿರುತ್ತಾರೆ ಎನ್ನುವರು. ದಿನಾಂಕ 16.10.2006 ರಂದು ದಾವಆಸ್ತಿಯ ಖಾತೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ನೆನಪಿರುವುದಿಲ್ಲ. ಸದರಿ ಸಮಯದಲ್ಲಿ ಎನ್.ನಾಗರಾಜು ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ನನಗೆ ನೆನಪಿರುವುದಿಲ್ಲ. ನಾನು ನಿಪಿ8 ರಂತೆ ಶುಲ್ಕ ಪಾವತಿಸಿದ ನಂತರ ಗ್ರಾಮ ಪಂಚಾಯಿತಿಯವರು ನನ್ನನ್ನು ಹಾಗೂ ಎನ್.ನಾಗರಾಜು ರವರನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ. ನಿಪಿ8 ದಾಖಲೆಯನ್ನು ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ9 ರಲ್ಲಿ 5 ನೇ ಪ್ರತಿವಾದಿಯ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯು ನಿಜವಾಗಿ ಕ್ರಯಪತ್ರ ಮಾಡಿಸಿಕೊಂಡಿದ್ದರೆ ನಿಪಿ9 ರಲ್ಲಿ ಅವರ ಹೆಸರು ನಮೂದಾಗುತ್ತಿತ್ತು ಎಂದರೆ ಸಾಕ್ಷಿದಾರರು ಅವರ ಹೆಸರಿಗೆ ಖಾತೆಯಾಗದಿದ್ದರಿಂದ ನನಗೆ ಸಂಬಂಧಪಟ್ಟ ಕ್ರಯಪತ್ರವನ್ನು ಡಿ.ಸಿ ನ್ಯಾಯಾಲಯದಲ್ಲಿ ನೀಡಿದ ನಂತರ ನನ್ನ ಹೆಸರಿಗೆ ಖಾತೆ ಮಾಡಲು ಡಿ.ಸಿ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ ಎನ್ನುವರು. ನಾನು ಡಿ.ಸಿ ನ್ಯಾಯಾಲಯಕ್ಕೆ ನನಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿ ನನ್ನ ಹೆಸರಿಗೆ ಖಾತೆ ಮಾಡುವಂತೆ ಮನವಿಯನ್ನು ನೀಡಿರುತ್ತೇನೆ. ನಿಪಿ9 ದಾಖಲೆಯನ್ನು ನಾನು, ಪುರಸಭೆಯವರು ಹಾಗೂ 5 ನೇ ಪ್ರತಿವಾದಿ ಸೇರಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಡಿ.ಸಿ ನ್ಯಾಯಾಲಯದಲ್ಲಿ ಆದೇಶವಾದ ನಂತರ ಎನ್.ನಾಗರಾಜು ರವರು ಪುನಃ ಡಿ.ಸಿ ನ್ಯಾಯಾಲಯದಲ್ಲಿ ರಿವಿಷನ್ 9/2006-07 ರಂತೆ ಅರ್ಜಿ ಸಲ್ಲಿಸಿದ್ದು ಸದರಿ ರಿವಿಷನ್ ಅರ್ಜಿಯಲ್ಲಿ ಮೂಲ ಖಾತೆದಾರರಾದ ಸೂರನ್ ದೇವಿರವರ ಹೆಸರಿಗೆ ಖಾತೆ ಇಡಲು ಆದೇಶವಾಗಿತ್ತು ಎಂದರೆ ಸರಿ. ನಂತರ ನಾನು 2009 ರಲ್ಲಿ ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಯವರ ಆದೇಶವನ್ನು ಎತ್ತಿ ಹಿಡಿದು ನನಗೆ ಸಿವಿಲ್ ನ್ಯಾಯಾಲಯಕ್ಕೆ ಹೋಗಲು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವಾದ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ11 ಚಲನ್ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ದತಿಯಲ್ಲಿ ಹಣ ಕಟ್ಟಿರುವ ಚಲನ್ ಎಂದರೆ ಸರಿ. ನಿಪಿ11 ದಾಖಲೆಯು ನಾನು ಕಟ್ಟಿರುವುದರಿಂದ ನನ್ನ ಕೈಗೆ ಬಂದಿರುತ್ತದೆ. ಸಿ.ಎನ್.ನಾಗಣ್ಣ ರವರ ಹೆಸರಿನಲ್ಲಿ ಎಂದಿಗೂ ಖಾತೆಯಿರಲಿಲ್ಲ ಎಂದರೆ ಸರಿ. ನಿಪಿ12 ಆಸ್ತಿ ತೆರಿಗೆಯನ್ನು ಯಾರು ಕಟ್ಟಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. 5 ನೇ ಪ್ರತಿವಾದಿಯ ಹೆಸರಿಗೆ ಎಂದಿಗೂ ಖಾತೆ ಆಗಿರುವುದಿಲ್ಲ, ನಿಪಿ12 ನ್ನು ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.